
ಬೆವಿಕಂ
BESCOM

# ಬೆಸ್ಕಾಂ ಸ್ನೇಹಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಗೃಹಪತ್ರಿಕೆ

ಸಂಪುಟ-2, ಸಂಚಿಕೆ-3 ತ್ರೈಮಾಸಿಕ, ಜುಲೈ-ಸೆಪ್ಟೆಂಬರ್ 2015 ಪುಟಗಳು-12




## 'ರೈತ ರಕ್ಷಿಸಿ-ವಿದ್ಯುತ್ ಉಳಿಸಿ'

- ಜಿಲ್ಲಾಮಟ್ಟದಲ್ಲಿ ಗ್ರಾಹಕ ಸಂಪರ್ಕ ಸಭೆ: ಮಾನ್ಯ ಇಂಧನ ಸಚಿವರ ಭರವಸೆ
- ವಿದ್ಯುತ್ ಸರಬರಾಜಿಗಾಗಿ ವಿತರಣ ಲೈಸನ್ಸ್‌ದಾರರ ಷರತ್ತುಗಳು

.....ಇನ್ನು ಹಲವು ವಿಷಯಗಳೊಂದಿಗೆ

# ‘ರೈತ ರಕ್ಷಿಸಿ - ವಿದ್ಯುತ್ ಉಳಿಸಿ’ ಕಾರ್ಯಕ್ರಮದ ಕೆಲ ಚಿತ್ರಗಳು



















**ಪಂಕಜ್‌ಕುಮಾರ್ ಪಾಂಡೆ**
ವ್ಯವಸ್ಥಾಪಕ ನಿರ್ದೇಶಕರು

# ವ್ಯವಸ್ಥಾಪಕ ನಿರ್ದೇಶಕರ ಸಂದೇಶ

ಆತ್ಮೀಯ ಸಹೋದ್ಯೋಗಿಗಳೇ,

ಮಳೆಗಾಲ ಬಂತೆಂದರೆ ವಿದ್ಯುತ್ ಇಲಾಖೆಗೆ ಸಮಸ್ಯೆಗಳ ಸರಮಾಲೆಯೇ ಎದುರಾಗುತ್ತದೆ. ಮಳೆಯಿಂದಾಗಿ ಜಲಾಶಯಗಳಿಗೆ ನೀರು ಹರಿದು ಜಲವಿದ್ಯುತ್ ಕೇಂದ್ರಗಳಲ್ಲಿ ವಿದ್ಯುತ್ ಉತ್ಪಾದನೆ ಸುಧಾರಿಸುವುದು ಸಂತೋಷದ ಸಂಗತಿಯಾದರೆ, ಭಾರಿ ಪ್ರಮಾಣದಲ್ಲಿ ಮಳೆ ಬೀಳುವ ಹಾಗೂ ಗಾಳಿಬೀಸುವ ಸ್ಥಳಗಳಲ್ಲಿ ವಿದ್ಯುತ್ ಕಂಬಗಳು ಮತ್ತು ಪರಿವರ್ತಕಗಳಿಗೆ ಹಾನಿಯಾಗುವುದು ಸಾಮಾನ್ಯ ಸಂಗತಿಯಾಗಿದೆ.

ಈ ಬಾರಿ ಬೇಸಿಗೆಯಲ್ಲಿ ಬಿದ್ದ ಬಿರು ಮಳೆ-ಗಾಳಿಗೆ ಬೆಂಗಳೂರು ನಗರವೂ ಸೇರಿದಂತೆ ಬೆಸ್ಕಾಂ ವ್ಯಾಪ್ತಿಯ ಹಲವು ಪ್ರದೇಶಗಳಲ್ಲಿ ಹಳೆಯ ಮರಗಳು ವಿದ್ಯುತ್ ತಂತಿ ಮತ್ತು ಕಂಬಗಳ ಮೇಲೆ ಬಿದ್ದು ಅನಾಹುತಗಳಾಗಿದ್ದುದು ತಮಗೆಲ್ಲಾ ತಿಳಿದಿದೆ. ಆದರೂ ಎದೆಗುಂದದೆ ನಮ್ಮ ಸಿಬ್ಬಂದಿ ಅಂತಹ ಸಮಸ್ಯೆಯನ್ನು ಸವಾಲಾಗಿ ಸ್ವೀಕರಿಸಿ ಸೂಕ್ತ ಸಮಯದಲ್ಲಿ ದುರಸ್ತಿ ಕಾರ್ಯವನ್ನು ಕೈಗೊಂಡಿರುವುದು ಶ್ಲಾಘನೀಯವಾಗಿದೆ.

ಇನ್ನು ಸಹಜವಾಗಿಯೇ ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ಹೆಚ್ಚು ಮಳೆ ಬೀಳುವ ಸಾಧ್ಯತೆ ಇರುವುದರಿಂದ ವಿದ್ಯುತ್ ಅವಘಡಗಳೂ ಜಾಸ್ತಿಯಾಗಬಹುದು. ಅದನ್ನು ಎದುರಿಸಿ ಸೂಕ್ತ ಸಮಯದಲ್ಲಿ ದುರಸ್ತಿಮಾಡಿ ಗ್ರಾಹಕರಿಗೆ ವಿದ್ಯುತ್ ಒದಗಿಸುವುದು ನಮ್ಮ ಆದ್ಯತೆಯಾಗಬೇಕು.

ಈ ನಿಟ್ಟಿನಲ್ಲಿ ಅಗತ್ಯ ಸಿಬ್ಬಂದಿ ಹಾಗೂ ಸಲಕರಣೆ ಕೊರತೆ ಉಂಟಾಗದಂತೆ ಕ್ರಮ ಕೈಗೊಳ್ಳಲು ಸಂಬಂಧಪಟ್ಟವರಿಗೆ ಸೂಚಿಸಲಾಗಿದೆ. ಸಿಬ್ಬಂದಿ ವರ್ಗದವರು ಒಗ್ಗಟ್ಟಾಗಿ ಕಾರ್ಯ ನಿರ್ವಹಿಸಿ ಗ್ರಾಹಕರ ಹಿತರಕ್ಷಣೆ ಮಾಡಬೇಕಾಗಿದೆ.

ತುರ್ತು ಕಾರ್ಯ ನಿರ್ವಹಣೆ ಸಂದರ್ಭದಲ್ಲಿ ಸಿಬ್ಬಂದಿಯವರು ತಮ್ಮ ಸುರಕ್ಷತೆಯನ್ನು ಕಡೆಗಣಿಸಬೇಡಿ. ನಿಮಗೆ ನೀಡಿರುವ ಸುರಕ್ಷಾ ಉಪಕರಣಗಳನ್ನು ಬಳಸಿ ಜೀವಕ್ಕೆ ಅಪಾಯವಾಗದಂತೆ ನೋಡಿಕೊಳ್ಳಿ. ಇನ್ನು ರೆವಿನ್ಯೂ ಸಂಗ್ರಹಕ್ಕೆ ಸಂಬಂಧಿಸಿದಂತೆ ಈಗಾಗಲೇ ಸಾಕಷ್ಟು ಉತ್ತಮ ಕೆಲಸ ಮಾಡಿದ್ದೀರಿ. ಅದನ್ನು ಹಾಗೇ ಮುಂದುವರಿಸಿ ಇನ್ನಷ್ಟು ರೆವಿನ್ಯೂ ಸಂಗ್ರಹ ಮಾಡಿ ಇಲಾಖೆಗೆ ಒಳ್ಳೆಯ ಹೆಸರು ತರೋಣ.

ಈ ವಿಚಾರದಲ್ಲಿ ಎಲ್ಲರದ್ದೂ ಸಾಮಾಜಿಕ ಜವಾಬ್ದಾರಿ ಇದೆ ಎಂಬುದನ್ನು ಮರೆಯಬಾರದು.

# ಸಂಪಾದಕೀಯ...

ಸುಡು ಬೇಸಿಗೆಯನ್ನು ಕಳೆದು ಮಳೆಗಾಲದತ್ತ ಈಗ ಹೊರಳುತ್ತಿದ್ದೇವೆ. ಜೂನ್ ತಿಂಗಳಲ್ಲಿ ತೀವ್ರ ಸ್ವರೂಪದ ಮಳೆಯನ್ನು ಕಾಣದಿದ್ದರೂ ಜುಲೈ ಮತ್ತು ಆಗಸ್ಟ್‌ನಲ್ಲಿ ಸಾಮಾನ್ಯವಾಗಿ ಮಳೆ ಜಾಸ್ತಿಯೇ ಇರುತ್ತದೆ. ಸೆಪ್ಟಂಬರ್ ಮತ್ತು ನಂತರದ ದಿನಗಳಲ್ಲಿ ಮುಂಗಾರು ಇಳಿಮುಖವಾಗುತ್ತದೆ.

ಈ ಬಾರಿಯೂ ವಾಡಿಕೆಯ ಮಳೆಗಾಲ ಇರುತ್ತದೆ ಎಂದು ಹವಾಮಾನ ಇಲಾಖೆ ಅಧಿಕಾರಿಗಳು ಹೇಳಿರುವುದರಿಂದ ಬೆಂಗಳೂರು ಹಾಗೂ ಮಲೆನಾಡಿನಲ್ಲಿ ಮಾಮೂಲಿ ಮಳೆ ಬೀಳುವ ಸಾಧ್ಯತೆ ಇದೆ.' ಮಳೆಗಾಲ ಎಂದರೆ ವಿದ್ಯುತ್ ಇಲಾಖೆ ಅಧಿಕಾರಿ ಸಿಬ್ಬಂದಿಗಳಿಗೆ ನಿದ್ದೆಗೆಡಿಸುವ ಸಮಯ. ತಮಗೆಲ್ಲಾ ತಿಳಿದಂತೆಯೇ ಆಗ ಅನಾಹುತಗಳು ಜಾಸ್ತಿ.

ಹಗಲು ವೇಳೆ ನೀರು ಕಾಯಿಸಲು, ನೀರನ್ನು ಪಂಪ್ ಮಾಡಲು, ಅಡಿಗೆ ಕೆಲಸಗಳಿಗೆ ವಿದ್ಯುತ್ ಬಳಸಿದರೆ, ರಾತ್ರಿ ಹೆಚ್ಚಾಗಿ ಬೆಳಕಿಗಾಗಿ ವಿದ್ಯುತ್‌ಅನ್ನು ಬಳಸುತ್ತೇವೆ. ಒಟ್ಟಾರೆ ಆಧುನಿಕ ಜಗತ್ತಿನಲ್ಲಿ ಪ್ರತಿಯೊಬ್ಬರೂ ನಿತ್ಯದ ಬದುಕಿಗಾಗಿ ವಿದ್ಯುತ್‌ಅನ್ನು ಅಬಲಂಬಿಸಿರುವುದು ಸರ್ವವಿಧಿತ.

ಮಳೆಗಾಲದಲ್ಲಿ ನೀರಾವರಿ ಪಂಪ್‌ಸೆಟ್‌ಗಳಿಗೆ ಸಂಬಂಧಿಸಿದಂತೆ ರೈತರ ಸಮಸ್ಯೆ ಅಷ್ಟಾಗಿ ಇಲ್ಲದಿದ್ದರೂ,ಇತರ ಗ್ರಾಹಕರ ಸಮಸ್ಯೆಗಳು ಇಲಾಖೆಗೆ ಸವಾಲು ಒಡ್ಡುತ್ತವೆ. ಮಳೆ-ಬಿರುಗಾಳಿಗೆ ಕಂಬಗಳು ಉರುಳಿ, ತಂತಿ ಕಡಿದು ವಿದ್ಯುತ್ ಸರಬರಾಜಿನಲ್ಲಿ ಅವ್ಯವಸ್ಥೆ ಉಂಟಾಗುವುದು ಸಹಜ.



ಆದರೆ ಸಮಸ್ಯೆಯನ್ನು ಸಕಾಲದಲ್ಲಿ ಬಗೆಹರಿಸಿ ಗ್ರಾಹಕರಿಗೆ ಸುಗಮ ವಿದ್ಯುತ್ ಒದಗಿಸುವ ಜವಾಬ್ದಾರಿ ನಮ್ಮ ಮೇಲಿದೆ. ಗ್ರಾಹಕರಿಂದ ದೂರುಗಳು ಬಂದಾಗ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಬೇಕು.

ಮಳೆ ಬೀಳುವ ಜಿಲ್ಲೆಗಳಲ್ಲಿನ ವಿದ್ಯುತ್ ಸಮಸ್ಯೆಗೆ ಆದ್ಯತೆ ನೀಡುವಂತೆ, ಮಳೆಯಾಗದ ಬಯಲು ಸೀಮೆ ಜಿಲ್ಲೆಗಳಲ್ಲೂ ಸುಗಮ ವಿದ್ಯುತ್ ಸರಬರಾಜು ಇರುವಂತೆ ನೋಡಿಕೊಳ್ಳುವುದು ನಮ್ಮ ಸಂಸ್ಥೆಯ ಆದ್ಯ ಕರ್ತವ್ಯ.

ಈ ಹಿನ್ನೆಲೆಯಲ್ಲಿ ನಾವೆಲ್ಲರೂ ಕಾರ್ಯನಿರತರಾಗಬೇಕು. ಇಲಾಖೆ ಹಾಗೂ ಸರ್ಕಾರಕ್ಕೆ ಒಳ್ಳೆಯ ಹೆಸರು ತರಬೇಕು. "ಬೆಸ್ಕಾಂ ಸ್ನೇಹಿ" ತ್ರೈಮಾಸಿಕ ನಿಮ್ಮೆಲ್ಲರ ಗೃಹಪತ್ರಿಕೆ, ಕಳೆದ 18 ತಿಂಗಳಿನಿಂದ ಪ್ರಕಟವಾಗುತ್ತಿದೆ. ನಿಮ್ಮಿಂದ ಲೇಖನಗಳನ್ನು ನಿರೀಕ್ಷಿಸುತ್ತದೆ. ಸಲಹೆ-ಸೂಚನೆಗಳಿಗೆ ಸ್ವಾಗತ.

ನಿಮ್ಮೆಲ್ಲರಿಗೂ ಸ್ವಾತಂತ್ರ್ಯೋತ್ಸವ ಹಾಗೂ ಗೌರಿ-ಗಣೇಶ ಹಬ್ಬದ ಹಾರ್ದಿಕ ಶುಭಾಶಯಗಳು.

ವಂದನೆಗಳೊಂದಿಗೆ,

ಸಂಪಾದಕಿ
**ಎನ್. ಜಯಂತಿ**
ಪ್ರಧಾನ ವ್ಯವಸ್ಥಾಪಕರು (ಗ್ರಾ & ಸಂ), ಬೆಸ್ಕಾಂ

# ಜಿಲ್ಲಾಮಟ್ಟದಲ್ಲಿ ಗ್ರಾಹಕ ಸಂಪರ್ಕ ಸಭೆ ಮಾನ್ಯ ಇಂಧನ ಸಚಿವರ ಭರವಸೆ



ರಾಜ್ಯ ಸರ್ಕಾರ ನಗರ ಪ್ರದೇಶಗಳ ಅಭಿವೃದ್ಧಿಯ ಜೊತೆಗೆ ನಾಡಿನ ಅನ್ನದಾತ ರೈತ ಬಾಂಧವರ ಶ್ರೇಯೋಭಿವೃದ್ಧಿಯ ಗುರಿಯನ್ನು ಹೊಂದಿದೆ ಎಂಬ ಸ್ಪಷ್ಟ ಸಂದೇಶಕ್ಕೆ ಸಾಕ್ಷಿಯಾಗಿತ್ತು ಮಾರ್ಚ್ ತಿಂಗಳಿನಲ್ಲಿ ಆಯೋಜಿಸಲಾಗಿದ್ದ "ರೈತರ ರಕ್ಷಿಸಿ–ವಿದ್ಯುತ್ ಉಳಿಸಿ" ಸಂವಾದ ಕಾರ್ಯಕ್ರಮ. ಬೆಂಗಳೂರಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಈ ಒಂದು ದಿನದ ಸಂವಾದ ಕಾರ್ಯಕ್ರಮಕ್ಕೆ ರಾಜ್ಯದ ಎಲ್ಲ ಜಿಲ್ಲೆಗಳ ರೈತ ಮುಖಂಡರು, ರೈತ ಪ್ರತಿನಿಧಿಗಳು ಆಗಮಿಸಿದ್ದು ವಿಶೇಷ ಆಕರ್ಷಣೆಯಾಗಿತ್ತು. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ.ಸಿದ್ದರಾಮಯ್ಯ ಹಾಗೂ ಮಾನ್ಯ ಇಂಧನ ಸಚಿವರಾದ ಶ್ರೀ.ಡಿ.ಕೆ.ಶಿವಕುಮಾರ್ ಉದ್ಘಾಟಿಸಿದ ಕಾರ್ಯಕ್ರಮದಲ್ಲಿ ಸಹಕಾರ ಸಚಿವರಾದ ಶ್ರೀ.ಎಚ್.ಎಸ್. ಮಹದೇವ ಪ್ರಸಾದ, ಕೃಷಿ ಸಚಿವರಾದ ಶ್ರೀ.ಕೃಷ್ಣ ಬೈರೇಗೌಡ ಸೇರಿದದಂತೆ ಇಂಧನ ಇಲಾಖೆಯ ಅಪರ ಮುಖ್ಯಕಾರ್ಯದರ್ಶಿ ಶ್ರೀ.ರವಿಕುಮಾರ್, ಎಲ್ಲ ಐದು ಎಸ್ಕಾಂಗಳ ವ್ಯವಸ್ಥಾಪಕ ನಿರ್ದೇಶಕರುಗಳು ಹಾಗೂ ಇಂಧನ ಇಲಾಖೆಯ ಹಲವು ಹಿರಿಯ/ಕಿರಿಯ ಅಧಿಕಾರಿಗಳು, ಸಿಬ್ಬಂದಿಗಳು ಉಪಸ್ಥಿತರಿದ್ದರು.

ಕ್ರೆಡಲ್ ಸಜ್ಜುಗೊಳಿಸಿದ್ದ ಸೌರಶಕ್ತಿ ಆಧಾರಿತ ವಿದ್ಯುತ್ ದೀಪವನ್ನು ಬೆಳಗಿಸಿ ಮಾತನಾಡಿದ ಸನ್ಮಾನ್ಯ ಮುಖ್ಯಮಂತ್ರಿಗಳು ಸರ್ಕಾರ ರೈತರ ಪರವಾಗಿದೆ, ರೈತರ ವಿರುದ್ಧವಾದ ಯಾವುದೇ ತೀರ್ಮಾನ ತೆಗೆದುಕೊಳ್ಳುವುದಿಲ್ಲ. ರೈತರ ಹಿತಾಸಕ್ತಿಗಾಗಿ ಇಂದಿನ ಪರಿಸ್ಥಿತಿಗೆ ತಕ್ಕಂತೆ ರೈತರ ಸಲಹೆ ಸೂಚನೆಗಳನ್ನು ಯಾವತ್ತೂ ಸ್ವೀಕರಿಸುತ್ತೇವೆ ಎಂಬ ಭರವಸೆ ನೀಡಿದರು.

ನಂತರ ಮಾತನಾಡಿದ ಮಾನ್ಯ ಇಂಧನ ಸಚಿವರಾದ ಶ್ರೀ ಡಿ.ಕೆ. ಶಿವಕುಮಾರರವರು ರೈತರ ಸಮಸ್ಯೆಗಳನ್ನು ಆಲಿಸಿ ಅವುಗಳಿಗೆ ಪರಿಹಾರ ನೀಡಲು ಅನುಕೂಲವಾಗುವಂತೆ ಮುಂದಿನ ದಿನಗಳಲ್ಲಿ ಜಿಲ್ಲಾಮಟ್ಟದಲ್ಲಿ ಗ್ರಾಹಕ ಸಂಪರ್ಕ ಸಭೆ ನಡೆಸಲಾಗುವುದು ಎಂದರು. ರೈತರ ಅನುಕೂಲಕ್ಕಾಗಿ ಒಂದು ಲಕ್ಷ ಟ್ರಾನ್ಸ್‌ಫಾರ್ಮರ್ ಖರೀದಿಗೆ ಸರ್ಕಾರ ಮುಂದಾಗಿದ್ದು, ಅದರಲ್ಲಿ 40 ಸಾವಿರ ಟ್ರಾನ್ಸ್‌ಫಾರ್ಮರ್ ಖರೀದಿಯಾಗಿದೆ, ಇನ್ನು ಉಳಿದವುಗಳನ್ನು ಖರೀದಿ ಮಾಡಿ



ಟ್ರಾನ್ಸ್‌ಫಾರ್ಮರ್ ಬ್ಯಾಂಕ್ ಸ್ಥಾಪಿಸುವ ಭರವಸೆ ನೀಡಿದರು.

ವಿದ್ಯುತ್ ಸರಬರಾಜು ಕಂಪನಿಗಳ ಖಾಸಗೀಕರಣಕ್ಕೆ ಸಂಬಂಧಿಸಿದಂತೆ ಮಾತನಾಡಿದ ಮಾನ್ಯ ಸಚಿವರು ಕಂಪನಿಗಳನ್ನು ಖಾಸಗೀಕರಣ ಮಾಡಬೇಕೆಂದು ಹಲವರು ಸರ್ಕಾರಕ್ಕೆ ಮನವಿ ಮಾಡಿದ್ದಾರೆ, ಆದರೆ ಇದಕ್ಕೆ ನನ್ನ ವಿರೋಧವಿದ್ದು ಕೇಂದ್ರ ಸರ್ಕಾರಕ್ಕೂ ಇದರ ಸಾಧಕ–ಬಾಧಕಗಳನ್ನು ಮನವರಿಕೆ ಮಾಡಿಕೊಡುತ್ತೇನೆ ಎಂದರು.

*"ವಿದ್ಯುತ್ ಹಂಚಿಕೆಯ ನೀತಿ ಬದಲಾಗಬೇಕಿದೆ. ವಿದ್ಯುತ್ ಹಂಚಿಕೆಯಲ್ಲಿ ನಗರ ಪ್ರದೇಶಗಳಿಗೆ ಸಿಗುವ ಆದ್ಯತೆ ಹಳ್ಳಿಗಳಿಗೂ ಸಿಗಬೇಕು".*

**–ಕೋಡಿಹಳ್ಳಿ ಚಂದ್ರಶೇಖರ್,** ರೈತ ಮುಖಂಡರು

*" ವಿದ್ಯುತ್ ಕ್ಷೇತ್ರದಲ್ಲಿ ಹೊಸ ಹೊಸ ಪ್ರಯೋಗಗಳ ಅಗತ್ಯವಿದೆ. ಸದ್ಯದ ಪರಿಸ್ಥಿತಿಯಲ್ಲಿ ರೈತರ ಸ್ಥಿತಿ ಕಷ್ಟಕರವಾಗಿದೆ. ಕೆಲವೊಂದುಸಾರಿ ರೈತರು ಸಹಾ ಪರಿಸ್ಥಿತಿಗೆ ತಕ್ಕಂತೆ ಸಹಕರಿಸಿಕೊಂಡು ಹೋಗಬೇಕಾಗುತ್ತದೆ".*

**–ಎಂ.ಪಿ.ನಾಡಗೌಡ,**ವಿಧಾನ ಪರಿಷತ್ ಮಾಜಿ ಸದಸ್ಯರು

*" ಉತ್ತರ ಕರ್ನಾಟಕದಲ್ಲಿನ ಏತ ನೀರಾವರಿಗೆ ಆದ್ಯತೆ ಕೊಡಿ. ಟ್ರಾನ್ಸ್‌ಫಾರ್ಮರ್ ಸಂಖ್ಯೆಗಳನ್ನು ಇನ್ನೂ ಹೆಚ್ಚಿಸಬೇಕು".*

**–ವೀರಕುಮಾರ ಪಾಟೀಲ್,** ಮಾಜಿ ಸಚಿವರು

*" ವಿದ್ಯುತ್ ಕಡಿವಾಣ ಕೇವಲ ರೈತರಿಗೆ ಸೀಮಿತವಾಗಿರುವುದು ಸರಿಯಲ್ಲ. ದೊಡ್ಡ ದೊಡ್ಡ ಕಲ್ಯಾಣ ಮಂಟಪ, ಶಾಪಿಂಗ್ ಮಾಲ್‌ಗಳಿಗೂ ಕಡಿವಾಣ ಹಾಕಿ. ಈ ರೀತಿಯ ಸಂವಾದ ಕಾರ್ಯಕ್ರಮಗಳನ್ನು ನಿಯಮಿತವಾಗಿ ಆಯೋಜಿಸಿ".*

**–ಕುರುಬೂರು ಶಾಂತಕುಮಾರ್,** ಅಧ್ಯಕ್ಷರು, ಕಬ್ಬು ಬೆಳೆಗಾರರ ಸಂಘ

# ಪಾದಚಾರಿ ಸ್ನೇಹಿ ಟ್ರಾನ್ಸ್‌ಫಾರ್ಮರ್‌ಗಾಗಿ ಸುಧಾರಿತ ಮಾದರಿ ಜಿಓಎಸ್




ರಸ್ತೆ ಬದಿಯ ಟ್ರಾನ್ಸ್‌ಫಾರ್ಮರನಿಂದ ಪಾದಚಾರಿಗಳಿಗೆ ತೊಂದರೆಯಾಗುತ್ತಿದೆ ಎಂಬ ದೂರು ಬೆಸ್ಕಾಂನ ಎಲ್ಲಾ ವಿಭಾಗಗಳಲ್ಲೂ, ಎಲ್ಲಾ ಅಧಿಕಾರಿ/ಸಿಬ್ಬಂದಿಗಳು ಎದುರಿಸಿರುವಂತದ್ದೆ. ಪಾದಚಾರಿ ಮಾರ್ಗದಲ್ಲಿ ಟ್ರಾನ್ಸ್‌ಫಾರ್ಮರ್ ನಮಗೆ ಬೇಡ ಅಂತ ಗ್ರಾಹಕರು ಒತ್ತಾಯಿಸಿದರೆ ಟ್ರಾನ್ಸ್‌ಫಾರ್ಮರಗಳನ್ನು ಇನ್ನೆಲ್ಲಿ ಸ್ಥಾಪಿಸುವುದು ಅನ್ನೋ ಬಗೆಹರಿಯದ ಸಮಸ್ಯೆ ಇಲಾಖೆಯದು. ಗ್ರಾಹಕರ ಅನುಕೂಲಕ್ಕಾಗಿ ಹತ್ತು ಹಲವೂ ಪ್ರಯೋಗಗಳನ್ನು ಮಾಡುತ್ತಿರುವ ಬೆಸ್ಕಾಂ ಈ ಸಮಸ್ಯೆಗೆ ಪರಿಹಾರವೆಂಬಂತೆ ಹೊಸ ಸುಧಾರಿತ ವಿನ್ಯಾಸದ ಗ್ರೂಪ್ ಆಪರೇಟಿಂಗ್ ಸ್ವಿಚ್‌ಗಳನ್ನು ಅಳವಡಿಸಲಿದೆ.

ನೆಲದಿಂದ ಮೂರು ಅಡಿ ಎತ್ತರದಲ್ಲಿದ್ದ ಗ್ರೂಪ್ ಆಪರೇಟಿಂಗ್ ಸ್ವಿಚ್‌ಗಳು ಟ್ರಾನ್ಸ್‌ಫಾರ್ಮರ್ ಕಂಬದಿಂದ ಆಚೆ ಚಾಚಿಕೊಂಡಿದ್ದು ಪಾದಚಾರಿಗಳು ಸುಲಭವಾಗಿ ನಡೆದಾಡಲು ಅಡ್ಡಿಯಾಗಿತ್ತಿವೆ. ಆದರೆ ಹೊಸ ಸುಧಾರಿತ ವಿನ್ಯಾಸದ ಗ್ರೂಪ್ ಆಪರೇಟಿಂಗ್ ಸ್ವಿಚ್‌ಗಳಲ್ಲಿ ಈ ಪೈಪನ್ನು ನೆಲದಿಂದ 7.5 ಅಡಿ ಎತ್ತರಿಸಲಾಗಿದೆ. ಇದರಿಂದಾಗಿ ಪಾದಚಾರಿಗಳು ಯಾವುದೇ ಅಡ್ಡಿ ಆತಂಕಗಳಿಲ್ಲದೆ ನಡೆದಾಡಬಹುದಾಗಿದೆ. ಪ್ರಾಯೋಗಿಕ ಹಂತವಾಗಿ ಈ ಹೊಸ ಮಾದರಿಯ ಜಿಓಎಸ್‌ಗಳನ್ನು ಬಾಣಸವಾಡಿ ಹಾಗೂ ಸಹಕಾರನಗರ ಉಪವಿಭಾಗದಲ್ಲಿ ಬದಲಾಯಿಸಲಾಗಿದೆ. ಸಹಕಾರನಗರ ಉಪವಿಭಾಗದಲ್ಲಿ ಒಂದು ಸಾವಿರ ಜಿಓಎಸ್‌ಗಳನ್ನು ಬದಲಾಯಿಸಲಾಗಿದ್ದು, ಜನಸಂಚಾರ ಹೆಚ್ಚಿರುವ ಪ್ರದೇಶದಲ್ಲಿ 20 ಸಾವಿರ ಜಿಓಎಸ್‌ಗಳನ್ನು ಮೊದಲ ಹಂತದಲ್ಲಿ ಬದಲಾಯಿಸಲಾಗುವುದು ಹಾಗೂ ಮುಂಬರುವ ಒಂದೂವರೇ ವರ್ಷದಲ್ಲಿ 60 ಸಾವಿರ ಹಳೇ ಮಾದರಿಯ ಜಿಓಎಸ್‌ಗಳನ್ನು ಬದಲಾಯಿಸಲಾಗುವುದು ಎಂದು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಶ್ರೀ.ಪಂಕಜ್‌ಕುಮಾರ್ ಪಾಂಡೆ ತಿಳಿಸಿದ್ದಾರೆ.




## ಅಭಿನಂದನೆ

ಕೆ.ಇ.ಬಿ.ಇಂಜನಿಯರ್ಸ್ ಆಸೋಸಿಯೆಶನ್‌ಗೆ ನೂತನವಾಗಿ ಆಯ್ಕೆಯಾದ ಶ್ರೀ ಎ.ಎನ್.ಜಯರಾಜ್‌ರವರ ತಂಡಕ್ಕೆ ಗೃಹಪತ್ರಿಕೆ ಬೆಸ್ಕಾಂ–ಸ್ನೇಹಿಯಪರವಾಗಿ ಹಾರ್ದಿಕ ಅಭಿನಂದನೆಗಳು.

# ಮಳೆಗಾಲದ ಸವಾಲುಗಳು



ಬೆಂಗಳೂರಿನಲ್ಲಿ ಸುರಿದ ಮಳೆ ಕಳೆದ ಹತ್ತು ವರ್ಷಗಳಲ್ಲೇ ಅತಿ ಹೆಚ್ಚು ಪೂರ್ವಮುಂಗಾರು ಎಂಬ ದಾಖಲೆ ನಿರ್ಮಿಸಿದೆ. ಹವಾಮಾನ ಇಲಾಖೆಯ ಮಾಹಿತಿ ಪ್ರಕಾರ ಮೇ 2005ರಲ್ಲಿ 6 ಸೆಂ.ಮೀ ಮಳೆಯಾಗಿತ್ತು. ಆದರೆ 2015ರ ಮೇ ತಿಂಗಳಿನಲ್ಲಿ ಸುರಿದ 7 ಸೆಂ.ಮೀ ಮಳೆ ಹೊಸ ದಾಖಲೆ ಮಾಡಿದೆ. ಮಳೆಯಾದಷ್ಟು ಬೆಳೆ ಹೆಚ್ಚುತ್ತೆ, ಕೆರೆ, ಕಟ್ಟೆಗಳು ತುಂಬುತ್ತೆ ಅನ್ನೋದು ಲೋಕರೂಢಿಯ ಮಾತು. ಆದರೆ ವಿದ್ಯುತ್ ಸರಬರಾಜು ಕಂಪನಿಗಳ ಪಾಲಿಗೆ ಮಳೆಗಾಲ ಒಂದು ರೀತಿ ಶಕ್ತಿ ಪರಿಕ್ಷೆಯ ಕಾಲವಿದ್ದಂತೆ. ಅದರಲ್ಲೂ ಈ ಬಾರಿಯಂತೂ ಮಳೆಯೊಂದಿಗೆ ಘಂಟೆಗೆ 70 ಕಿ.ಮೀ ವೇಗದ ಬಿರುಗಾಳಿ ಬೆಂಗಳೂರಿನ ಹಲವು ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜು ವ್ಯವಸ್ಥೆಯನ್ನೇ ಹಲವೂ ಘಂಟೆಗಳ ಕಾಲ ಅಸ್ತವ್ಯಸ್ತಗೊಳಿಸಿತ್ತು


ಬೆಂಗಳೂರು ನಗರದ ಮಟ್ಟಿಗೆ ವಿಶ್ಲೇಷಿಸುವುದಾದರೆ, ಈ ಬಾರಿ ಮಳೆಗಾಲದಲ್ಲಿ ಹೆಚ್ಚು ಹಾನಿಯಾಗಿದ್ದು ಬೆಸ್ಕಾಂನ ದಕ್ಷಿಣ ವಲಯದಲ್ಲಿ. ದಕ್ಷಿಣವಲಯದ ಜಯನಗರ, ಜೆ.ಪಿ.ನಗರ, ಬನಶಂಕರಿ, ಪದ್ಮನಾಭನಗರ ಸೇರಿದಂತೆ ಹಲವು ಪ್ರದೇಶಗಳಲ್ಲಿ 400ಕ್ಕೂ ಹೆಚ್ಚು ಮರಗಳು/ಮರದ ರೆಂಬೆಗಳು ವಿದ್ಯುತ್ ತಂತಿಗಳ ಮೇಲೆ,ಕಂಬಗಳ ಮೇಲೆ ಬಿದಿದ್ದರಿಂದಾಗಿ ವಿದ್ಯುತ್ ಸರಬರಾಜಿನಲ್ಲಿ ತೀವ್ರ ವ್ಯತ್ಯಯಉಂಟಾಗಿತ್ತು. ಇಂಥ ಪರಿಸ್ಥಿತಿಯನ್ನು ಅಧಿಕಾರಿಗಳು/ಸಿಬ್ಬಂದಿಗಳು ನಿರಂತರ ಶ್ರಮದಿಂದ ನಿರ್ವಹಿಸಿದ್ದು ಶ್ಲಾಘನೀಯ.

### ಮಳೆಗಾಲ–ನಮ್ಮ ಕರ್ತವ್ಯ

- ಬೆಸ್ಕಾಂ ಸಹಾಯವಾಣಿ ಸಂಖ್ಯೆ 1912ನ್ನು ತಮ್ಮ ವಿಭಾಗದ ಸಮಸ್ತ ಗ್ರಾಹಕರ ಗಮನಕ್ಕೆ ತನ್ನಿ ಹಾಗೂ ಜನಪ್ರಿಯಗೊಳಿಸಿ.
- 58888 ಸಂಖ್ಯೆಗೆ ಕಿರುಸಂದೇಶ(ಎಸ್.ಎಂ.ಎಸ್) ಮೂಲಕ ದೂರು ನೀಡಲು ಗ್ರಾಹಕರನ್ನು ಪ್ರೋತ್ಸಾಹಿಸಿ. ವಿಶೇಷವಾಗಿ ಮಳೆಗಾಲದಲ್ಲಿ ಒಟ್ಟಿಗೆ ಬರುವ ಸಾವಿರಾರು ಕರೆಗಳಿಂದಾಗಿ ಸಹಾಯವಾಣಿಯ ಮಾರ್ಗಗಳು ಒಂದೇ ಸಮನೆ ಕಾರ್ಯನಿರತವಾಗುವ ಸಾಧ್ಯತೆಗಳಿವೆ. ಅಲ್ಲದೆ ಕಿರುಸಂದೇಶ ಬಳಕೆಯ ಅಭ್ಯಾಸವಿರದ ಹಿರಿಯ ನಾಗರಿಕರಿಗೆ ಈ ಮಾರ್ಗವು ಸಿಗದೆ ಅಡಚಣೆ ಉಂಟಾಗಬಹುದು
- ಮಳೆಗಾಲದಲಿ ತಮ್ಮ ವಿಭಾಗದ ಟೊಳ್ಳು ಮರ–ರೆಂಬೆಗಳನ್ನು ಮೊದಲೇ ಪತ್ತೆ ಮಾಡಿ ಅವುಗಳನ್ನು ಕತ್ತರಿಸಿ
- ಮಳೆಗಾಲದಲ್ಲಿ ಗ್ರಾಹಕರು ತಮ್ಮ ಮನೆಯ ಸುತ್ತಮುತಲಿರುವ ಮರಗಳನ್ನು ಬಿ.ಬಿ.ಎಂ.ಪಿ. ಅಥವಾ ಅರಣ್ಯ ಇಲಾಖೆಯ ವತಿಯಿಂದ ಪರೀಕ್ಷಿಸಿಕೊಳ್ಳಲು ಮಾಹಿತಿ ನೀಡಿ ಪ್ರೋತ್ಸಾಹಿಸಿ. ಇದರಿಂದಾಗಿ ಟೊಳ್ಳು ಮರ–ರೆಂಬೆಗಳನ್ನು ಮೊದಲೇ ಪತ್ತೆ ಮಾಡಿ, ಅವಶ್ಯ ಕ್ರಮ ಕೈಗೊಂಡು ಮುಂದಾಗಬಹುದಾದ ಅನಾಹುತಗಳನ್ನು ತಡೆಯಬಹುದು.
- ಮರದ ರೆಂಬೆಗಳು ತುಂಡಾಗಿ ತಂತಿಯ ಮೇಲೆ ಬಿದ್ದರೆ, ಅದನ್ನು ತೆಗೆಯುವ ಪ್ರಯತ್ನ ಮಾಡದಂತೆ ಗ್ರಾಹಕರಿಗೆ ತಿಳಿವಳಿಕೆ ನೀಡಿ. ಇಲ್ಲದಿದ್ದರೆ, ಪ್ರಾಣಾಪಾಯವಾಗಬಹುದು.
- ಮಳೆಯಿಂದಾಗಿ ತಂತಿ/ಕಂಬ ನೆಲಕ್ಕೆ ಬಿದ್ದಿದ್ದರೆ, ಅದರಿಂದ ಸಾಧ್ಯವಾದಷ್ಟೂ ದೂರವಿದ್ದು ತಕ್ಷಣವೇ ಸಹಾಯವಾಣಿಗೆ ಮಾಹಿತಿ ನೀಡಲು ಗ್ರಾಹಕರಿಗೆ ತಿಳಿಸಿ.
- ವಿದ್ಯುತ್ ಕಂಬ/ಪರಿವರ್ತಕ ಸುತ್ತಲೂ ಮಳೆ ನೀರು ಸಂಗ್ರಹವಾಗುತ್ತಿದ್ದರೆ, ತಕ್ಷಣವೇ ಇದನ್ನು ಸರಿಪಡಿಸಲು ಕ್ರಮ ಕೈಗೊಳ್ಳಿ. ಇಲ್ಲದಿದ್ದರೆ, ಪ್ರಾಣಹಾನಿಯಾಗುವ ಸಾಧ್ಯತೆ ಹೆಚ್ಚು.
- ಮಳೆಗಾಲದಲ್ಲಿ ತೇವಾಂಶ ಹೆಚ್ಚಾಗಿ ಪರಿವರ್ತಕದ ಬಾಕ್ಸ್‌ಗಳಿಂದ ವಿದ್ಯುತ್ ಆಘಾತ ಉಂಟಾಗುವ ಸಾಧ್ಯತೆ ಹೆಚ್ಚು. ಈ ಬಗ್ಗೆ ಗ್ರಾಹಕರಿಗೆ ತಿಳಿವಳಿಕೆ ನೀಡಿ. ಪರಿವರ್ತಕಗಳನ್ನು ಮುಟ್ಟುವುದು, ಅದರ ಸಮೀಪ ಕಸ ಹಾಕುವುದು, ಮೂತ್ರ ವಿಸರ್ಜನೆ ಮಾಡುವುದು ಪ್ರಾಣಹಾನಿಗೆ ದಾರಿ ಎಂದು ಮನವರಿಕೆ ಮಾಡಿ.



# ಒಂದು ಮೆಗಾವಾಟ್ ಸೌರವಿದ್ಯುತ್ ಉತ್ಪಾದನೆ





ಮೇಲ್ಛಾವಣಿ ಸೌರಶಕ್ತಿ ಪಿ.ವಿ.ವ್ಯವಸ್ಥೆಯನ್ನು ಜಾರಿ ಮಾಡಿದ ಕೇವಲ7 ತಿಂಗಳುಗಳೊಳಗೆ 1000 ಕಿಲೋವಾಟ್(1ಮೆಗಾವಾಟ್) ಸೌರ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಿ ಬೆಸ್ಕಾಂ ಮೈಲಿಗಲ್ಲು ಸಾಧಿಸಿದೆ.

ದಿನಾಂಕ 07.11.2014ರಂದು ಕರ್ನಾಟಕ ರಾಜ್ಯದ ಇಂಧನ ಸಚಿವರಾದ ಮಾನ್ಯ ಡಿ.ಕೆ. ಶಿವಕುಮಾರ್‌ರವರು ಬೆಸ್ಕಾಂಕೇಂದ್ರಕಚೇರಿಯಲ್ಲಿಈ ಮೇಲ್ಛಾವಣಿ ಸೌರಶಕ್ತಿ ಪಿ.ವಿ. ವಿದ್ಯುತ್ ಯೋಜನೆಯನ್ನು ಉದ್ಘಾಟಿಸಿದರು. ಪ್ರಸ್ತಾಪಿತ 19 ಮೆಗಾವಾಟ್ ಸಾಮರ್ಥ್ಯದ ಮೇಲ್ಛಾವಣಿ ಸೌರಶಕ್ತಿ ಪಿ.ವಿ.ವ್ಯವಸ್ಥೆಯ ಸಂಬಂಧವಾಗಿ, ಬೆಸ್ಕಾಂ ಈವರೆಗೆ 409 ಆನ್–ಲೈನ್ ಅರ್ಜಿಗಳನ್ನು ನೋಂದಾಯಿಸಿಕೊಂಡಿದೆ. 7 ತಿಂಗಳುಗಳ ಅವಧಿಯೊಳಗೆ, ಕಂಪನಿಯು 1 ಮೆಗಾವಾಟ್ ಸೌರಶಕ್ತಿ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಿದ್ದು, ಈ ಕಾರ್ಯಕ್ರಮಕ್ಕೆ ಪ್ರಮುಖ ಕೊಡುಗೆದಾರರು ಸಂತ ಜೋಸೆಫ್ ಕಾಲೇಜು (100 ಕೆ.ಡಬ್ಲ್ಯು.ಪಿ), ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಆಡ್‌ವಾನ್ಸ್‌ಡ್ ಸೈನ್ಸಸ್ (100 ಕೆ.ಡಬ್ಲ್ಯು.ಪಿ), ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (400 ಕೆ.ಡಬ್ಲ್ಯು.ಪಿ), ಶ್ರೀಮತಿ ಸುಂದರಮ್ಮ (100 ಕೆ.ಡಬ್ಲ್ಯು.ಪಿ),

ಈ ಮೇಲ್ಛಾವಣಿ ಸೌರಶಕ್ತಿ ಪಿ.ವಿ. ವ್ಯವಸ್ಥೆಯನ್ನು ಉತ್ತೇಜಿಸಲು ಬೆಸ್ಕಾಂ ಏಕ ಸ್ಥಳದಲ್ಲಿ ಪೂರ್ಣ ಮಾಹಿತಿಯನ್ನು ಒದಗಿಸುವ ಸಲುವಾಗಿ, ತನ್ನ ನಿಗಮ ಕಾರ್ಯಾಲಯದಲ್ಲಿ ಮೀಸಲಿತ ಸ್ಥಿರ ದೂರವಾಣಿ ಸೌಲಭ್ಯ (080–22340816) ಹಾಗೂ (solarhelpdesk@bescom.co.in) ಇ–ಮೈಲ್ ಸೌಲಭ್ಯವನ್ನು ಕಲ್ಪಿಸಿದ್ದು ಎಲ್ಲ ವಿಭಾಗ/ಉಪವಿಭಾಗದ ಅಧಿಕಾರಿಗಳು ಈ ವ್ಯವಸ್ಥೆಯ ಕುರಿತು ಗ್ರಾಹಕರಿಗೆ ಮಾಹಿತಿ ನೀಡಲು ಕೋರಲಾಗಿದೆ.

ಮೇಲ್ಛಾವಣಿ ಸೌರಶಕ್ತಿ ಪಿ.ವಿ. ವ್ಯವಸ್ಥೆಯ ಸಂಬಂಧವಾಗಿ ತಾಂತ್ರಿಕ ಕೌಶಲತೆಯ ತರಬೇತಿಯನ್ನು ನೀಡಲು ಬೆ.ವಿ. ಕಂಪನಿಯು ಜನವರಿ 12, 2015ರಂದು ಜಿ.ಇ.ಆರ್.ಎಂ.ಐ.ನೊಂದಿಗೆ ಒಪ್ಪಂದದ ನಿವೇದನೆಯನ್ನು ಮಾಡಿಕೊಂಡಿದೆ. ಈ ಸಂಬಂಧವಾಗಿ, ಈ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವ ಪರಿಣಿತರನ್ನು ಆಹ್ವಾನಿಸಿ, ಇಡೀ ರಾಜ್ಯದ ಎಲ್ಲ ಇಂಜಿನಿಯರುಗಳಿಗೆ (ಕ್ಷೇತ್ರ ಕರ್ತವ್ಯ) 2 ದಿನಗಳ ತರಬೇತಿ ಕಾರ್ಯಕ್ರಮವನ್ನು ನಡೆಸಿತು.

ಬೆವಿಕಂಪನಿ ವ್ಯಾಪ್ತಿಯಲ್ಲಿ ವಿದ್ಯುತ್ ಜಾಲ ಸಂಪರ್ಕಿತ ಮೇಲ್ಛಾವಣಿ ಸೌರಶಕ್ತಿ ಪಿ.ವಿ. ಯಂತ್ರೋಪಕರಣದ ಅನುಷ್ಠಾನಕ್ಕಾಗಿ ಅಭಿಯೋಜಕ ಪಟ್ಟಿಯಲ್ಲಿ ಸೇರಿಸಲು ಆಸಕ್ತ ಅಭಿಯೋಜಕರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಈ ಅಭಿಯೋಜನೆಯ ಅವಧಿ ಒಂದು ವರ್ಷ(ಮೂರು ವರ್ಷಕ್ಕೆ ವಿಸ್ತರಿಸಬಹುದಾಗಿದೆ). ತತ್ಸಂಬಂಧ ಕಾಯಿದೆಯ ಅಡಿಯಲ್ಲಿ ನೋಂದಾಯಿಸಿಕೊಂಡ ಸೌರಶಕ್ತಿ ಸ್ಥಾವರ/ಯೋಜನೆಯ ಅಭಿವೃದ್ಧಿದಾರರು/ವ್ಯವಸ್ಥೆಯ ಸಂಯೋಜಕರು/ಯಂತ್ರೋಪಕರಣ ಭಾಗಗಳ ಸರಬರಾಜುದಾರರು ಅಥವಾ ವೆಂಡರುದಾರರು/ಸಮಾಲೋಚಕ ಏಜೆನ್ಸಿಗಳು/ಪ್ರಸಿದ್ಧ ಹಾಗೂ ತತ್ಸಂಬಂಧ ಸರ್ಕಾರೇತರ ಸಂಸ್ಥೆಗಳು/ಸ್ವಾಯತ್ತ ಉದ್ಯಮಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಭಾವಿ ಗ್ರಾಹಕರ ಸ್ಥಾಪನದಲ್ಲಿ ವಿನ್ಯಾಸ, ಸರಬರಾಜು, ಸ್ಥಾಪನೆ, ಪರೀಕ್ಷೆ, ಅನುಷ್ಠಾನ, ಖಾತರಿ ಹಾಗೂ ನಿರ್ವಹಣೆ ಸಹಿತ ವಿದ್ಯುತ್ ಜಾಲ ಸಂಪರ್ಕಿತ ಮೇಲ್ಛಾವಣಿ ಸೌರಶಕ್ತಿ ಪಿ.ವಿ. ಯಂತ್ರೋಪಕರಣದ ಸೌಲಭ್ಯ ಒದಗಿಸುವುದು ಈ ಯೋಜನೆಯ ಉದ್ದೇಶ.

**ಸತೀಶ್ ಕುಮಾರ್,**
ಪ್ರಧಾನ ವ್ಯವಸ್ಥಾಪಕರು,
ಡಿ.ಎಸ್.ಎಮ್. ಬೆಸ್ಕಾಂ



## ಅಭಿನಂದನೆ

**ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ (ಕೆ.ಇ.ಆರ್.ಸಿ)**
**ನೂತನ ಅಧ್ಯಕ್ಷರಾಗಿ ನೇಮಕವಾದ, ನಿವೃತ್ತ ಐಎಎಸ್ ಅಧಿಕಾರಿ**
**ಶ್ರೀ ಎಂ.ಕೆ. ಶಂಕರಲಿಂಗೇಗೌಡ**
**ಅವರಿಗೆ "ಬೆಸ್ಕಾಂ ಸ್ನೇಹಿ" ವತಿಯಿಂದ ಹಾರ್ದಿಕ ಶುಭಾಶಯಗಳು.**

# ವಿದ್ಯುತ್ ಸರಬರಾಜಿಗೆ ವಿತರಣ ಲೈಸೆನ್ಸ್‌ದಾರರ ಷರತ್ತುಗಳು

- ವಿದ್ಯುತ್ ಗುತ್ತಿಗೆದಾರರ ಮೂಲಕ ಮಾಡಿಸಿರುವ ವಿದ್ಯುತ್ ಸಂಪರ್ಕ ಸೇವಾ ಮಾರ್ಗಕ್ಕೆ, ವಿದ್ಯುತ್ ಸರಬರಾಜು ಒದಗಿಸಿದ ದಿನಾಂಕದಿಂದ ಒಂದು ವರ್ಷದ ಅವಧಿಗೆ ಅರ್ಜಿದಾರರು ಖಾತರೀದಾರರಾಗಿರತಕ್ಕದ್ದು. ಕಳಪೆ ಕೆಲಸ ಅಥವಾ ಕಳಪೆಗುಣಮಟ್ಟದ ವಸ್ತು ಬಳಕೆಯಿಂದಾಗಿ ಸದರಿ ಅವಧಿಯಲ್ಲಿ ಯಾವುದೇ ಲೋಪದೋಷ ಉಂಟಾದರೆ, ಗ್ರಾಹಕರು ಅವರ ಸ್ವಂತ ವೆಚ್ಚದಲ್ಲಿ ದುರಸ್ತಿಪಡಿಸತಕ್ಕದ್ದು.
- ಅರ್ಜಿದಾರರು ಅಧಿಕ ವಿದ್ಯುತ್ ಬೇಕೆಂದು ಕೋರಿದರೆ, ಈ ಪ್ರಯುಕ್ತ ಸದರಿ ಸೇವಾ ಮಾರ್ಗವನ್ನು ಬದಲಾಯಿಸಬೇಕಾಗಿಬಂದರೆ, ಆಗ ಅದರ ವೆಚ್ಚವನ್ನು ಅರ್ಜಿದಾರರೇ ಭರಿಸಿ ವಿದ್ಯುತ್ ಗುತ್ತಿಗೆದಾರರ ಮೂಲಕ ಮಾರ್ಗವನ್ನು ಬದಲಾಯಿಸಿಕೊಳ್ಳತಕ್ಕದ್ದು.
- ಮಾಪಕದ ಮೇಲೆ ಹೆಚ್ಚುವರಿ ಮೊಹರುಗಳನ್ನು ಹಾಕಲು ಅನುಕೂಲವಾಗುವಂತೆ, ಎಲ್.ಟಿ. ವಾಣಿಜ್ಯ ಮತ್ತು ಕೈಗಾರಿಕಾ ಸ್ಥಾಪನಗಳ ಅರ್ಜಿದಾರರು ಮಾಪಕದ ಮೇಲೆ ಅನುಮೋದಿತ ಮಾದರಿಯ ಹೊದಿಕೆಗಳನ್ನು ಒದಗಿಸಲು ಸೌಲಭ್ಯ ಮಾಡಿಕೊಡತಕ್ಕದ್ದು. ಮೀಟರಿಂಗ್ ಉದ್ದೇಶಕ್ಕಾಗಿ ಕರೆಂಟ್ ಟ್ರಾನ್ಸ್‌ಫಾರ್ಮರುಗಳನ್ನು ಉಪಯೋಗಿಸಬೇಕಾಗಿ ಬಂದರೆ, ಕರೆಂಟ್ ಟ್ರಾನ್ಸ್‌ಫಾರ್ಮರ್ ಮತ್ತು ಮೀಟರುಗಳಿಗೆ ಪ್ರತ್ಯೇಕ ಸ್ಥಳಗಳನ್ನು ಒದಗಿಸಿ, ಅನುಮೋದಿತ ವಿನ್ಯಾಸದ ಬೀಗ ಹಾಕಬಹುದಾದ ಹವಾನಿರೋಧಕ ಹೊದಿಕೆಯ ಸೌಲಭ್ಯವನ್ನು ಒದಗಿಸತಕ್ಕದ್ದು.
- ಎಚ್.ಟಿ/ಇ.ಚ್.ಟಿ. ವಿದ್ಯುತ್ ಸರಬರಾಜು ಬಯಸುವ ಅರ್ಜಿದಾರರು, ಅವರ ವೆಚ್ಚದಲ್ಲೇ, ಲೈಸೆನ್ಸುದಾರರ ಮಾಪಕ ಸಲಕರಣೆಗಳಿಗೆ ಅನುಮೋದಿತ ವಿನ್ಯಾಸದ ಬೀಗ ಹಾಕಬಹುದಾದ ಹವಾನಿರೋಧಕ ಹೊದಿಕೆಯ ಸೌಲಭ್ಯವನ್ನು ಒದಗಿಸತಕ್ಕದ್ದು.
- ಮಾಪಕ ಅಥವಾ ಮಾಪಕ ಪ್ಯಾನೆಲ್‌ಅನ್ನು ಮುಖ್ಯ ಪ್ರವೇಶ ದ್ವಾರದ ಬಳಿ ಸುಲಭವಾಗಿ ಸಮೀಪಿಸಬಹುದಾದ ಸ್ಥಳದಲ್ಲಿ ಅಳವಡಿಸತಕ್ಕದ್ದು. ಮಾಪಕವನ್ನು ಕಟ್ಟಡದ ಹೊರಗೆ ಅಳವಡಿಸಬೇಕಾಗಿ ಬಂದರೆ, ಲೈಸೆನ್ಸುದಾರರು ತೃಪ್ತಿಯಾಗುವಂತೆ, ಪ್ರತಿಕೂಲ ಹವಾಮಾನದಿಂದ ರಕ್ಷಿಸುವ ತಡೆದುಕೊಳ್ಳುವ ಸಾಮರ್ಥ್ಯದ ಸೂಕ್ತ ವಿನ್ಯಾಸದ ಹೊದಿಕೆಯನ್ನು ಒದಗಿಸತಕ್ಕದ್ದು. ಅವಶ್ಯವಿರುವೆಡೆ, ಲೈಸೆನ್ಸುದಾರರು ದೂರ ಸ್ಥಳದಿಂದ ಮಾಪಕ ವಾಚನ ಮಾಡುವ ಸ್ವಾತಂತ್ರ್ಯವನ್ನು ಹೊಂದಿರುತ್ತಾರೆ.
- ಹಾಲಿ ಇರುವ ವಿದ್ಯುತ್ ಮಾರ್ಗದ ಸ್ಥಳವನ್ನು ಗ್ರಾಹಕರು ಮಾರ್ಪಾಡು ಮಾಡಬಯಸಿದರೆ, ಲೈಸೆನ್ಸುದಾರರು ಗ್ರಾಹಕರಿಂದ ಸದರಿ ಕಾರ್ಯಕ್ಕೆ ಬಳಸುವ ಹೆಚ್ಚುವರಿ ಸಾಮಗ್ರಿಗಳ ವೆಚ್ಚ, ಕೂಲಿ ವೆಚ್ಚ, ಶೇ.10ರಂತೆ ಮೇಲ್ವಿಚಾರಣ ಶುಲ್ಕವನ್ನು ವಸೂಲಿ ಮಾಡಿ ಕಾಮಗಾರಿಯನ್ನು ಕೈಗೊಳ್ಳತಕ್ಕದ್ದು ಅಥವಾ ಗ್ರಾಹಕರಿಂದ ಆ ಕೆಲಸದ ಅಂದಾಜು ವೆಚ್ಚದ ಶೇ.10ರಷ್ಟು(ಸಿಬ್ಬಂದಿ ವೆಚ್ಚವನ್ನು ಹೊರತುಪಡಿಸಿ) ಮೇಲ್ವಿಚಾರಣ ಶುಲ್ಕವನ್ನು ವಸೂಲು ಮಾಡಿ, ಗ್ರಾಹಕರೇ ಅವರ ಸ್ವಂತ ವೆಚ್ಚದಲ್ಲಿ ಕೆಲಸವನ್ನು ಮಾಡಿಕೊಳ್ಳಲು ಅನುಮತಿಸಬಹುದು.
- ವಿದ್ಯುತ್ ಮಾರ್ಗದ ಸ್ಥಳ ಮಾರ್ಪಾಡು ವೆಚ್ಚದ ಬಗ್ಗೆ ಅಥವಾ ಕೆಲಸದ ಬಗ್ಗೆ ಯಾವುದೇ ರೀತಿಯ ಭಿನ್ನಾಭಿಪ್ರಾಯ ಅಥವಾ ವಿವಾದ ಉಂಟಾದರೆ, ಪ್ರಕರಣವನ್ನು ತೀರ್ಮಾನಕ್ಕನುಗುಣವಾಗಿ ಮುಖ್ಯ ವಿದ್ಯುತ್ ಪರಿವೀಕ್ಷಕರು, ಕರ್ನಾಟಕ ಸರ್ಕಾರ / ಮುಖ್ಯ ವಿದ್ಯುತ್ ಪರಿವೀಕ್ಷಕರು ಅಧಿಕೃತಗೊಳಿಸಿದ ಅಧಿಕಾರಿಯ ಬಳಿ ಸಲ್ಲಿಸತಕ್ಕದ್ದು.
- **ದಿನಾಂಕ 20.03.2008ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲ್ಪಟ್ಟ ಅಧಿಸೂಚನೆ ಸಂಖ್ಯೆ ಕವಿನಿಆ: ಸಿಎಸ್: ಡಿ: 07: 08, ದಿನಾಂಕ 14.03.2008ರ ಪ್ರಕಾರ ತಿದ್ದುಪಡಿಗೊಂಡ ಆವೃತಿ.**

ಕೆಳಕಂಡ ಸ್ಥಳಗಳಲ್ಲಿ, ಹಾಗೂ ಆಯೋಗದ ಅನುಮೋದನೆಯೊಂದಿಗೆ ಕಾಲಕಾಲಕ್ಕೆ ಲೈಸೆನ್ಸುದಾರರು ಸೂಚಿಸಬಹುದಾದ ಸ್ಥಳಗಳಲ್ಲಿ ವಿದ್ಯುತ್ ಸಂಪರ್ಕ ಸೇವಾ ಮಾರ್ಗವನ್ನು ಭೂಗತ ಕೇಬಲ್ ಮೂಲಕವೇ ಅಳವಡಿಸತಕ್ಕದ್ದು.


**ಅನುಸೂಚಿ:**

1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರದೇಶ
2. ಚಿತ್ರದುರ್ಗ ನಗರ ಮುನಿಸಿಪಾಲಿಟಿ ಕಾರ್ಪೊರೇಷನ್ ಪ್ರದೇಶ
3. ದಾವಣಗೆರೆ ನಗರ ಮುನಿಸಿಪಾಲಿಟಿ ಕಾರ್ಪೊರೇಷನ್ ಪ್ರದೇಶ
4. ತುಮಕೂರು ನಗರ ಮುನಿಸಿಪಾಲಿಟಿ ಕಾರ್ಪೊರೇಷನ್ ಪ್ರದೇಶ
5. ಕೋಲಾರ ನಗರ ಮುನಿಸಿಪಾಲಿಟಿ ಕಾರ್ಪೊರೇಷನ್ ಪ್ರದೇಶ
6. ರಾಬರ್ಟ್‌ಸನ್‌ಪೇಟೆ ನಗರ ಮುನಿಸಿಪಾಲಿಟಿ ಕಾರ್ಪೊರೇಷನ್ ಪ್ರದೇಶ

**ಮುಂದುವರಿಯುವುದು...**

# ಜ್ಞಾನಪೀಠ ಪ್ರಶಸ್ತಿ

**ಡಾ. ಯು.ಆರ್. ಅನಂತಮೂರ್ತಿ (1962–2014)**



ಡಾ. ಉಡುಪಿ ರಾಜಗೋಪಾಲಾಚಾರ್ಯ ಅನಂತಮೂರ್ತಿ ಕನ್ನಡದ ಪ್ರಮುಖ ಸಾಹಿತಿ, ಚಿಂತಕ ಹಾಗೂ ವಿಮರ್ಶಕ. ಇಂಗ್ಲಿಷ್ ಪ್ರಾಧ್ಯಪಕರಾಗಿ ವೃತ್ತಿಜೀವನ ಆರಂಭಿಸಿದ ಅವರು, ಅನಂತರ ಶಿಕ್ಷಣ ಮುಂತಾದ ಕ್ಷೇತ್ರಗಳಲ್ಲಿ ಅನೇಕ ಮುಖ್ಯ ಹುದ್ದೆಗಳನ್ನು ನಿರ್ವಹಿಸಿದರು. ತಮ್ಮ ಸಮಗ್ರ ಸಾಹಿತ್ಯಕ್ಕಾಗಿ 1994ರಲ್ಲಿ ಜ್ಞಾನಪೀಠ ಪ್ರಶಸ್ತಿ ಪಡೆದರು. ಈ ಈ ಮೂಲಕ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಆರನೆಯ ಕನ್ನಡಿಗರು ಎನ್ನಿಸಿಕೊಂಡರು.

ಅನಂತಮೂರ್ತಿಯವರು 1932 ಡಿಸೆಂಬರ್ 21ರಂದು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಮೇಳಿಗೆ ಎಂಬ ಹಳ್ಳಿಯಲ್ಲಿ ಜನಿಸಿದರು. ಕಾದಂಬರಿ, ನಾಟಕ, ಆತ್ಮಕಥೆ, ವಿಮರ್ಶೆ, ಪ್ರಬಂಧ, ಕವನ ಸಂಕಲನ ಹೀಗೆ ಸಾಹಿತ್ಯದ ಎಲ್ಲ ಪ್ರಾಕಾರಗಳಲ್ಲೂ ಇವರದ್ದು ಎತ್ತಿದ ಕೈ.


ಕೃಷ್ಣರಾವ್ ಚಿನ್ನದ ಪದಕ, ಸಂಸ್ಕಾರ, ಘಟಶ್ರಾದ್ಧ ಮತ್ತು ಬರ ಚಿತ್ರಗಳಿಗೆ ಅತ್ಯುತ್ತಮ ಕತೆಗಾಗಿ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ,

ಮಾಸ್ತಿ ಪ್ರಶಸ್ತಿ, ಬಷೀರ್ ಪುರಸ್ಕಾರ, ರವೀಂದ್ರನಾಥ್ ಟ್ಯಾಗೋರ್ ಸ್ಮಾರಕ ಪದಕ, ಪದ್ಮಭೂಷಣ, ಶಿಖರ್ ಸಮ್ಮಾನ್ ಸೇರಿದಂತೆ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. 2002ರಿಂದ ಮೂತ್ರಪಿಂಡ ಕಾಯಿಲೆಯಿಂದ ನರಳುತ್ತಿದ್ದ ಇವರು 2014ರ ಆಗಸ್ಟ್ 22ರಂದು ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು.

# ರಾಷ್ಟ್ರೀಯ ದಿನಾಚರಣೆ

**ವಿಶ್ವ ಜನಸಂಖ್ಯಾ ದಿನ (ಜುಲೈ 11):** ಪ್ರತಿ ನಿಮಿಷಕ್ಕೆ 160ರಂತೆ ವರ್ಷವೊಂದಕ್ಕೆ 8.4 ಕೋಟಿ ಜನಸಂಖ್ಯೆ ಏರುತ್ತಿದೆ. ಹೀಗೆ ಜಾಗತಿಕವಾಗಿ ಜನಸಂಖ್ಯೆ ಏರುತ್ತಿರುವ ವೇಗ ನೋಡಿ ದೇಶದ ಸಂಸತ್ 1987ರಲ್ಲೇ ದೇಶದ ಜನಸಂಖ್ಯಾ ದಿನಾಚರಣೆಗೆ ಮುನ್ನುಡಿ ಬರೆಯಿತು. ಆ ದಿನದಂದು ದೇಶದ ಜನಸಂಖ್ಯೆ 5 ಶತಕೋಟಿ ತಲುಪಿತಂತೆ. ಹೀಗೆ ಈ ದಿನವನ್ನು ಆಚರಿಸುವುದರ ಮೂಲಕ ದೇಶದಲ್ಲಿ ಜನಸಂಖ್ಯೆ ಹೆಚ್ಚಳದಿಂದಾಗುವ ವಿವಿಧ ಸಮಸ್ಯೆಗಳ ಕುರಿತಾಗಿ ದೇಶದ ಸಮುದಾಯದ ಗಮನ ಸೆಳೆಯಲಾಗುತ್ತಿದೆ

**ಈದ್-ಉಲ್-ಫಿತರ್ (ಜುಲೈ 18):** ರಂಜಾನ್ ಮಾಸದಲ್ಲೇ ಬರುವ ಈ ಹಬ್ಬಕ್ಕೆ ಈದ್–ಉಲ್–ಫಿತರ್ ಎಂದೇ ಕರೆಯುತ್ತಾರೆ. ಇದು ಇಸ್ಲಾಂ ಧರ್ಮೀಯರ ಪ್ರಮುಖ ಹಬ್ಬಗಳಲ್ಲಿ ಒಂದು. ಇದು ದಾನದ ಹಬ್ಬ. ಒಂದು ತಿಂಗಳವರೆಗೆ ಬಡವ – ಶ್ರೀಮಂತ ಎನ್ನುವ ಭೇದವಿಲ್ಲದೇ ಎಲ್ಲರೂ ಉಪವಾಸದಿಂದಿದ್ದು ಅಲ್ಲಾನನ್ನು ಪ್ರಾರ್ಥಿಸುತ್ತಾರೆ. ಬಡತನ ಹಾಗೂ ಹಸಿವು ಏನೆಂಬುದನ್ನು ಅರಿಯುವ ಸಲುವಾಗಿ ಇಂಥದ್ದೊಂದು ಆಚರಣೆ ರೂಢಿಯಲ್ಲಿ ಬಂದಿದೆ.




ಇಸ್ಲಾಂ ಎಂದೂ ಸಂಪತ್ತಿನ ಕೇಂದ್ರೀಕರಣವನ್ನು ವಿರೋಧಿಸುತ್ತದೆ. ಯಾವತ್ತೂ ಶ್ರೀಮಂತನನ್ನು ದಾನ ನೀಡುವುದಕ್ಕೆ ಪ್ರೇರೇಪಿಸುತ್ತದೆ. ಇಸ್ಲಾಂನ ಐದು ಪ್ರಧಾನ ಕರ್ಮಗಳಲ್ಲಿ ಒಂದಾದ 'ಝಕಾತ್' ಇದಕ್ಕೆ ಪುಷ್ಟಿ ನೀಡುತ್ತದೆ. ಅದಲ್ಲದೇ ಹಲವಾರು ಪುಣ್ಯ ಕಾರ್ಯಗಳ ಸಂದರ್ಭಗಳಲ್ಲೂ ದಾನ ಕಡ್ಡಾಯಗೊಳಿಸುತ್ತದೆ. ಅಂತಹ ಒಂದು ಹಬ್ಬವಾಗಿದೆ ಈದ್–ಉಲ್–ಫಿತರ್.

**ವಿಶ್ವ ಸ್ನೇಹಿತರ ದಿನ (ಆಗಸ್ಟ್ 3):** ಆಗಸ್ಟ್ ತಿಂಗಳ ಪ್ರಥಮ ಭಾನುವಾರವನ್ನು ಗೆಳೆತನದ ದಿನವನ್ನಾಗಿ ಆಚರಿಸಲಾಗುತ್ತದೆ. ಈ ದಿನವ ಪಾಶ್ಚಾತ್ಯರ ಬಳುವಳಿಯಾಗಿ ನಮಗೆ ಸಿಕ್ಕಿದ್ದರೂ ಸಮಾಜದ ಇತರ ವಿಶೇಷ ದಿನಗಳ ಮಧ್ಯೆ ಈ ದಿನವೂ ಹಾಸುಹೊಕ್ಕಾಗಿದೆ. ಅಮೆರಿಕದಲ್ಲಿ 1935, ಆಗಸ್ಟ್ ಒಂದರ ಸಮಯ. ಸ್ನೇಹಿತನೊಬ್ಬನನ್ನು ಗಲ್ಲಿಗೇರಿಸಿದ್ದನ್ನು ಸಹಿಸದ ಆತನ ಸ್ನೇಹಿತ ಪತ್ರ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡನಂತೆ. ಈ ವಿಷಯ ಅಮೆರಿಕದ ತುಂಬೆಲ್ಲಾ ಹರಿದಾಡಿತು. ಅವರಬ್ಬರ ಗೆಳೆತನದ ಕಥೆ ಅಮೆರಿಕದವರ ಮನಸ್ಸಿಗೆ ನಾಟಿತು. ಈ ಇಬ್ಬರ ಮಧುರ ಸ್ನೇಹದ ನೆನಪಿಗೆಂದೇ ಪ್ರತಿ ವರ್ಷದ ಆಗಸ್ಟ್ ತಿಂಗಳ ಮೊದಲ ಭಾನುವಾರವನ್ನು ಫ್ರೆಂಡ್‌ಶಿಪ್ ಡೇ ಹೆಸರಿನಲ್ಲಿ ಆಚರಿಸಲು ನಿರ್ಧರಿಸಲಾಯಿತು ಎನ್ನಲಾಗುತ್ತದೆ.

**ಸ್ವಾತಂತ್ರ್ಯ ದಿನಾಚರಣೆ (ಆಗಸ್ಟ್ 15):** ಭಾರತ 1947ರ ಆಗಸ್ಟ್ 15ರಂದು ಬ್ರಿಟೀಷರಿಂದ ಸ್ವತಂತ್ರವಾಯಿತು. ಪ್ರತಿ ವರ್ಷ ಭಾರತದಾದ್ಯಂತ ಆ ದಿನವನ್ನು ಸ್ವಾತಂತ್ರ್ಯ ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿದೆ. ಇದು 68ನೇ ಸ್ವಾತಂತ್ರ್ಯ ವರ್ಷ. ಈ ದಿನ ದೇಶಾದ್ಯಂತ ರಾಷ್ಟ್ರೀಯ ರಜಾದಿನವನ್ನಾಗಿ ಆಚರಿಸಲಾಗುತ್ತದೆ. ದೇಶದ ಹಲವೆಡೆ ದೇಶದ ಹಲವೆಡೆ ತ್ರಿವರ್ಣ ಧ್ವಜವನ್ನು ಹಾರಿಸಲಾಗುತ್ತದೆ.



ಈ ಆಚರಣೆಯ ಪ್ರಮುಖ ಸಮಾರಂಭ ದೆಹಲಿಯ ಕೆಂಪುಕೋಟೆಯಲ್ಲಿ ನಡೆಯುತ್ತದೆ. ಈ ಸಮಾರಂಭದಲ್ಲಿ ಭಾರತದ

**ಮುಂದಿನ ಪುಟಕ್ಕೆ...**

# ಹಲ್ಲಿನ ಶುಭ್ರತೆಗೆ ಮನೆಯಲ್ಲೇ ಟೂಥ್‌ಪೇಸ್ಟ್

ಸಾಮಾನ್ಯವಾಗಿ ದಿನವೂ ಹಲ್ಲನ್ನು ಮಾತ್ರ ತಿಕ್ಕುವುದು ರೂಢಿ, ಆದರೆ ಬಾಯಿಯ ಸ್ವಚ್ಛತೆಗೆ ನಾಲಿಗೆ ಶುಚಿಗೊಳಿಸುವುದೂ ಅಷ್ಟೇ ಮುಖ್ಯ. ಆದ್ದರಿಂದ ಬೇವಿನಕಡ್ಡಿಯನ್ನು ಎರಡು ತುಂಡುಗಳಾಗಿಸಿ ಅದರಿಂದ ನಾಲಿಗೆಯನ್ನು ಸ್ವಚ್ಛಗೊಳಿಸಿ. ಇದರಿಂದ ಸದಾ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ಇದರ ಹೊರತಾಗಿಯೂ ನೈಸರ್ಗಿಕ ವಿಧಾನಗಳಿವೆ. ಅವುಗಳೆಂದರೆ,

- ಬೆಳ್ಳುಳ್ಳಿಯನ್ನು ಜಜ್ಜಿ ಅದಕ್ಕೆ ಉಪ್ಪು ತೇರಿಸಿ ಪೇಸ್ಟ್ ಮಾಡಿಕೊಳ್ಳಿ. ಇದರಿಂದ ಬಾಯಿ ಮುಕ್ಕಳಿಸುತ್ತಾ ಬನ್ನಿ. ಯಾವುದೇ ರೀತಿಯ ಒಸಡಿನ ಸಮಸ್ಯೆಗಳಿದ್ದರೆ ಅದು ಮಾಯವಾಗುತ್ತದೆ. ಅಷ್ಟೇ ಅಲ್ಲದೆ, ಹಲ್ಲು ಹುಳುಕಾಗುವುದನ್ನು ಇದು ತಡೆದು ಹಲ್ಲನ್ನು ಬಲಿಷ್ಟಗೊಳಿಸುತ್ತದೆ.
- ಪಲಾವ್ ಎಲೆಯನ್ನು ಪುಡಿ ಮಾಡಿಕೊಂಡು ಇದಕ್ಕೆ ಸ್ವಲ್ಪ ಹಾಲನ್ನು ಬೆರೆಸಿಕೊಂಡು ಪೇಸ್ಟ್‌ನಂತೆ ಮಾಡಿಕೊಳ್ಳಿ. ಈ ಪೇಸ್ಟನ್ನು ಹಲ್ಲಿಗೆ ಹಚ್ಚಿ. 10 ನಿಮಿಷ ಬಿಟ್ಟು ಇದನ್ನು ಚೆನ್ನಾಗಿ ತೊಳೆದು ನೋಡಿ.
- ಕ್ಯಾರೆಟ್ ಜ್ಯೂಸ್ ಕೂಡ ಹಲ್ಲು ಹೊಳೆಯಲು ಸಹಕಾರಿ. ಜ್ಯೂಸ್‌ಗೆ ಚಿಟಿಕೆ ಉಪ್ಪು ಬೆರೆಸಿ ಲೇಪಿಸಿಕೊಳ್ಳಬೇಕು. ಇದರಿಂದ ಹಲ್ಲು ಫಳಫಳ ಎನ್ನುವುದು.
- ಒಂದು ಹಿಡಿಯಷ್ಟು ಸ್ಟ್ರಾಬೆರ್ರಿಯನ್ನು ಹಿಂಡಿ ರಸ ಮಾಡಿಕೊಳ್ಳಬೇಕು. ಈ ರಸವನ್ನು ಹಲ್ಲುಗಳಿಗೆ ಲೇಪಿಸಬೇಕು. ಆ ರಸ ಹಲ್ಲುಗಳ ಮೇಲೆಯೇ ಒಣಗಲು ಬಿಟ್ಟು ನಂತರ ನೀರಿನಿಂದ ಬಾಯಿ ಮುಕ್ಕಳಿಸಬೇಕು. ಇದು ಹಲ್ಲುಗಳನ್ನು ಬೆಳ್ಳಗೆ ಮಾಡುವುದರ ಜೊತೆಗೆ, ಉಸಿರಿನ ದುರ್ವಾಸನೆಯನ್ನೂ ನಿವಾರಿಸುತ್ತದೆ.
- ಮೊದಲೇ ಹೇಳಿದ ಹಾಗೆ ನಮ್ಮ ಅಜ್ಜ-ಅಜ್ಜಿಯಂದಿರು ಉಪಯೋಗಿಸುತ್ತಿದ್ದ ಬೇವಿನ ಕಡ್ಡಿ. ಇದು ಬ್ಯಾಕ್ಟೀರಿಯಾವನ್ನು ನಾಶ ಮಾಡುವುದಲ್ಲದೆ ಹಲ್ಲನ್ನು ಝಗಮಗಿಸುತ್ತದೆ. ಬೇವು ಎಂದರೇನೇ ಕಹಿ. ಇನ್ನು ಹಲ್ಲು ಉಜ್ಜಿದರೆ ಬಾಯಿಂ ಕಹಿಯಾಗುವುದಿಲ್ಲವೇ ಎಂದು ಪ್ರಶ್ನಿಸಬಹುದು, ಇದು ನಿಜ. ಇದರ ಕಡ್ಡಿಯನ್ನು ಬಾಯಲ್ಲಿ ಹಾಕಿದರೆ ಕಹಿ ಎನಿಸುತ್ತದೆ. ಆದರೆ ಆರೋಗ್ಯಕ್ಕೆ ಮಾತ್ರ ಇದು ಸಿಹಿ. ಹಾಗೆಯೇ, ಆರಂಭದ ದಿನಗಳಲ್ಲಿ ಇದು ಕಹಿ ಎನಿಸಿದರೂ, ಪ್ರತಿದಿನ ಬಳಕೆ ಮಾಡುತ್ತಾ ಬಂದರೆ ಆ ಭಾವನೆ ಹೋಗುತ್ತದೆ. ಕಹಿಗೆ ದೇಹವು ಒಗ್ಗಿಕೊಂಡು ಅದರ ಅನುಭವ ಆಗುವುದಿಲ್ಲ.
- ಕಿತ್ತಲೆ ಹಣ್ಣಿನ ಸಿಪ್ಪೆಯಿಂದ ವಾರಕ್ಕೆ ಎರಡು ಸಲ ಹಲ್ಲನ್ನು ಉಜ್ಜುವ ಮೂಲಕವೂ ಹಲ್ಲಿನ ಗುಣಮಟ್ಟ ಕಾಯ್ದುಕೊಳ್ಳಬಹುದು.
- ಲೋಳೆ ರಸ ಮುಖದ ಅಂದಕ್ಕೆ ಮಾತ್ರವಲ್ಲದೆ ಹಲ್ಲಿನ ಆರೋಗ್ಯಕ್ಕೂ ಪರಿಣಾಮಕಾರಿಯಾದ ಔಷಧ. ಇದನ್ನು ಹಲ್ಲಿನ ಮೇಲೆ ಪೇಸ್ಟ್ ಬದಲು ಉಪಯೋಗಿಸಬಹುದು.
- ಆಲೀವ್ ಮತ್ತು ಬಾದಾಮಿ ಎಣ್ಣೆಯ ಮಿಶ್ರಣವನ್ನು ಮಾಡಿಕೊಳ್ಳಿ. ಈ ಮಿಶ್ರಣವನ್ನು ಬೆಳಗ್ಗೆ ಎದ್ದ ಕೂಡಲೇ ನಿಮ್ಮ ಹಲ್ಲುಗಳಿಗೆ ಲೇಪಿಸಿ ಉಜ್ಜಿ. ಇದನ್ನು 5 ದಿನ ಸತತವಾಗಿ ಮಾಡುವುದರಿಂದ ನಿಮ್ಮ ಹಲ್ಲುಗಳು ಫಳಫಳ ಹೊಳೆಯುತ್ತವೆ.
- ಸಾಮಾನ್ಯವಾಗಿ ಮೂಲಂಗಿ ಕೊಳ್ಳುವಾಗ ಅದರ ಎಲೆ ಕಿತ್ತು ತರುತ್ತೇವೆ. ಆದರೆ ಮೂಲಂಗಿಯಲ್ಲಿ ಇರುವ ಹಲವಾರು ಆರೋಗ್ಯವರ್ಧಕ ಗುಣಗಳಂತೆ ಅದರ ಲೆಲೆ ಕೂಡ ಸಾಕಷ್ಟು ಪ್ರಯೋಜನಕಾರಿಯಾಗಿದೆ. ಮೂಲಂಗಿ ಎಲೆ ಜಗಿಯುವುದು ಅಥವಾ ಅದರ ಜ್ಯೂಸ್ ಮಾಡಿ ಕುಡಿಯುತ್ತಿದ್ದರೆ ಹಲ್ಲಿನ ಬಲಿಷ್ಠತೆಗೆ ಸಹಕಾರಿಯಾಗುವುದು.
- ಒಂದು ನಿಂಬೇ ಹಣ್ಣನ್ನು ಎರಡು ಭಾಗಗಳಾಗಿ ಕತ್ತರಿಸಿ ಅದನ್ನು ನೀರಿನಲ್ಲಿ ಮುಳುಗಿಸಿ ಇಡಬೇಕು. ಇದನ್ನು ಹಲ್ಲು ಉಜ್ಜುವಾಗ ಬಳಸುತ್ತಾ ಬಂದರೆ ದಂತರೋಗಗಳು ಹತ್ತಿರ ಸುಳಿಯುವುದಿಲ್ಲ.
- ಶುದ್ಧ ಅರಿಸಿನವನ್ನು ಹಾಲಿನೊಂದಿಗೆ ಬೆರೆಸಿ ಪೇಸ್ಟ್ ಮಾಡಿಕೊಂಡು ಅದನ್ನು ಹಲ್ಲುಗಳಿಗೆ ಆಗಾಗ್ಗೆ ಹಚ್ಚುವುದು ಕೂಡ ಒಳ್ಳೆಯದು.
- ಹಲ್ಲು ತುಂಬಾ ಹಳದಿ ಬಣ್ಣಕ್ಕೆ ತಿರುಗಿದ್ದರೆ, ಆ್ಯಪಲ್ ಸಿಡೆರ್ ವಿನೆಗರ್ ಉಪಯೋಗಿಸಬೇಕು. ಹಲ್ಲು ತಿಕ್ಕಿದ ನಂತರ ಇದರಿಂದ ಬಾಯಿ ಮುಕ್ಕಳಿಸುತ್ತಿದ್ದರೆ ಹಲ್ಲಿನಲ್ಲಿ ಇರುವ ಕೊಳೆಗಳು ಮಾಯವಾಗುತ್ತವೆ.

---

...ಹಿಂದಿನ ಪುಟದಿಂದ

ಪ್ರಧಾನ ಮಂತ್ರಿಗಳು ರಾಷ್ಟ್ರಧ್ವಜವನ್ನು ಹಾರಿಸಿ, ರಾಷ್ಟ್ರಗೀತೆ ಜನ ಗಣ ಮನ ಹಾಡಿ ನಂತರ ರಾಷ್ಟ್ರವನ್ನುದ್ದೇಶಿಸಿ ಭಾಷಣ ಮಾಡುತ್ತಾರೆ. ಈ ಭಾಷಣದಲ್ಲಿ, ದೇಶದ ಸಾಧನೆ, ದೇಶದ ಮುಂದಿರುವ ಪ್ರಮುಖ ಸವಾಲುಗಳ ಬಗ್ಗೆ ಮಾತನಾಡಿ, ಕೆಲವು ಪ್ರಗತಿಪರ ಯೋಜನೆಗಳನ್ನು ಪ್ರಕಟಿಸಲಾಗುತ್ತದೆ. ಈ ದಿನದಂದು ರಾಷ್ಟ್ರಪಿತ ಮಹಾತ್ಮ ಗಾಂಧಿ ಸೇರಿದಂತೆ ದೇಶದ ಸ್ವಾತಂತ್ರ್ಯಕ್ಕೆ ಹೋರಾಡಿದ ನಾಯಕರನ್ನು ಸ್ಮರಿಸಲಾಗುತ್ತದೆ.

**ಶಿಕ್ಷಕರ ದಿನ (ಸೆಪ್ಟೆಂಬರ್ 5):** ಶಿಕ್ಷಕರಾಗಿ ಹಲವಾರು ವರ್ಷಗಳ ಕಾಲ ಸೇವೆ ಸಲ್ಲಿಸಿರುವ ಡಾ. ಎಸ್. ರಾಧಾಕೃಷ್ಣನ್ ಭಾರತ ಕಂಡ ಅಗ್ರಗಣ್ಯ ಶಿಕ್ಷಕರಲ್ಲಿ ಪ್ರಮುಖರು. 1962ರಲ್ಲಿ ಇವರು ಭಾರತದ ರಾಷ್ಟ್ರಪತಿಗಳಾಗಿದ್ದಾಗ ಇವರ ಜನ್ಮದಿನವಾದ ಸೆ. 5ರಂದು ಹುಟ್ಟಿದ ಹಬ್ಬ ಆಚರಿಸಲು ಸ್ನೇಹಿತರು ಮುಂದಾದಾಗ ನನ್ನ ಹುಟ್ಟುಹಬ್ಬ ಆಚರಣೆ ಬೇಡ. ಈ ದಿನವನ್ನು ಶಿಕ್ಷಕರ ದಿನವನ್ನಾಗಿ ಆಚರಿಸಿ & ಎಂದು ರಾಧಾಕೃಷ್ಣನ್ ಹೇಳಿದರು. ಅಂದಿನಿಂದ (1962) ಅವರ ಜನ್ಮದಿನವನ್ನು ಶಿಕ್ಷಕರ ದಿನವನ್ನಾಗಿ ಆಚರಿಸಲಾಗುತ್ತಿದೆ. ವಿಶ್ವದ ಎಲ್ಲ ದೇಶಗಳಲ್ಲಿ ಶಿಕ್ಷಕರ ದಿನವನ್ನು ಬೇರೆ ಬೇರೆದಿನಾಂಕಗಳಂದು ಆಚರಿಸಲಾಗುತ್ತಿದ್ದರೂ, ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳಲ್ಲಿ ಪ್ರತಿವರ್ಷ ಅಕ್ಟೋಬರ್ 5ರಂದು ವಿಶ್ವ ಶಿಕ್ಷಕರ ದಿನವನ್ನು ಆಚರಿಸಬೇಕೆಂದು ಯುನೆಸ್ಕೋ ಕರೆ ನೀಡಿದೆ.

**ವಿಶ್ವ ಸಾಕ್ಷರತಾ ದಿನ (ಸೆಪ್ಟೆಂಬರ್ 8):** ಶಿಕ್ಷಣ ಮೂಲಭೂತ ಹಕ್ಕು. ಎಲ್ಲರಿಗೂ ಶಿಕ್ಷಣ ಕೈಗೆಟುಕುವಂತಾಗಬೇಕು. ಸಮಾಜದಲ್ಲಿ ಜಾತಿ,




ಧರ್ಮ, ಬಡವ, ಶ್ರೀಮಂತ ಎಂಬ ಭೇದಭಾವವಿಲ್ಲದೆ ಪ್ರತಿಯೊಬ್ಬರಿಗೂ ಶಿಕ್ಷಣ ದೊರೆಯಬೇಕು. ಅಕ್ಷರದ ಜೊತೆಗೆ ಬದುಕನ್ನು ಕಲಿಯುವಂತಾಗಬೇಕು. ಸಮಾನತೆ ಮತ್ತು ಸಾಮಾಜಿಕ ನ್ಯಾಯದ ಆಧಾರದ ಮೇಲೆ ಎಲ್ಲಾ ಮಕ್ಕಳಿಗೆ ಸಮಾನ ಗುಣಮಟ್ಟದ ಶಿಕ್ಷಣ ದೊರೆಯಬೇಕು ಎಂಬ ಉದ್ದೇಶದಿಂದ ವಿಶ್ವ ಸಾಕ್ಷರತಾ ದಿನವನ್ನು ಪ್ರತಿವರ್ಷವೂ ಆಚರಿಸಲಾಗುತ್ತದೆ.

# ಬೆಸ್ಕಾಂನಲ್ಲಿ ಆಯೋಜಿಸಲಾಗಿದ್ದ ಮಹಿಳಾ ದಿನಾಚರಣೆ ಸಾಂಸ್ಕೃತಿಕ ಕಾರ್ಯಕ್ರಮಗಳು















## ಹುಟ್ಟುಹಬ್ಬದ ಶುಭಾಶಯಗಳು

2015ನೇ ವರ್ಷದ ಜುಲೈ, ಆಗಸ್ಟ್ ಹಾಗೂ ಸೆಪ್ಟೆಂಬರ್ ತಿಂಗಳಿನಲ್ಲಿ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ಬೆಸ್ಕಾಂನ ಅಧಿಕಾರಿಗಳು/ ಸಿಬ್ಬಂದಿಗಳಿಗೆ "ಬೆಸ್ಕಾಂ ಸ್ನೇಹಿ"ಯ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.


**-ಸಂಪಾದಕೀಯ ಮಂಡಳಿ.**

## ಹಾರ್ದಿಕ ಬೀಳ್ಕೊಡುಗೆ

ಹತ್ತು ಹಲವು ವರ್ಷ ಸೇವೆ ಸಲ್ಲಿಸಿ ಬೆಸ್ಕಾಂನ ಏಳಿಗೆಗೆ ಶ್ರಮಿಸಿ 2015ನೇ ವರ್ಷದ ಜುಲೈ, ಆಗಸ್ಟ್, ಸೆಪ್ಟೆಂಬರ್ ತಿಂಗಳಿನಲ್ಲಿ ನಿವೃತ್ತಿ ಹೊಂದುತ್ತಿರುವ ಅಧಿಕಾರಿಗಳು/ಸಿಬ್ಬಂದಿಗೆ "ಬೆಸ್ಕಾಂ ಸ್ನೇಹಿ"ಯ ಭಾವಪೂರ್ಣ ಅಭಿನಂದನೆ ಹಾಗೂ ಶುಭಾಶಯಗಳು.

**-ಸಂಪಾದಕೀಯ ಮಂಡಳಿ.**




## ನಗೆಹನಿ

**ಹೆಂಡತಿ** (ಗಂಡನಿಗೆ): ನಿಮ್ಮನ್ನು ಮದುವೆಯಾಗುವುದರ ಬದಲು ಒಬ್ಬ ರಾಕ್ಷಸನನ್ನು ಮದುವೆಯಾಗಿದ್ದರೆ ಚೆನ್ನಾಗಿರುತ್ತಿತ್ತು.

**ಗಂಡ**(ಹೆಂಡತಿಗೆ): ರಕ್ತ ಸಂಬಂಧಿಗಳು ಮದುವೆಯಾಗುವುದಿಲ್ಲ ಕಣೇ.

**ವಿದ್ಯಾರ್ಥಿನಿ**(ಅಳುತ್ತಾ): ನನಗೆ ಕೇವಲ 88 ಅಂಕಗಳು ಬಂದಿವೆ, ಇನ್ನೂ ಹೆಚ್ಚು ಅಂಕ ನಿರೀಕ್ಷಿಸಿದ್ದೆ.

**ವಿದ್ಯಾರ್ಥಿ:** ಅಯ್ಯೋ ನಿನ್ನ, ನಿನಗೆ ಬಂದಿರುವ ಅಂಕಗಳಲ್ಲಿ ಇಬ್ಬರು ವಿದ್ಯಾರ್ಥಿಗಳು ಉತ್ತೀರ್ಣರಾಗುತ್ತಿದ್ದರು.


## ಸಂಪಾದಕ ಮಂಡಳಿ

**ಶ್ರೀ ಪಂಕಜ್‌ಕುಮಾರ್ ಪಾಂಡೆ,** ವ್ಯವಸ್ಥಾಪಕ ನಿರ್ದೇಶಕರು — **ಅಧ್ಯಕ್ಷರು**
**ಶ್ರೀ ಎಚ್. ನಾಗೇಶ್,** ನಿರ್ದೇಶಕರು (ತಾಂತ್ರಿಕ) — **ಮುಖ್ಯ ಸಂಪಾದಕರು**
**ಶ್ರೀ ಬಿ.ಎಲ್. ಗುರುಪ್ರಸಾದ್,** ನಿರ್ದೇಶಕರು (ಹಣಕಾಸು) — **ಮುಖ್ಯ ಸಂಪಾದಕರು**
**ಶ್ರೀಮತಿ. ಎನ್. ಜಯಂತಿ,** ಪ್ರಧಾನ ವ್ಯವಸ್ಥಾಪಕರು(ಗ್ರಾ.ಸಂ) — **ಸಂಪಾದಕರು**
**ಶ್ರೀಮತಿ ಗೀತಾ ಚೌಹ್ಹಾಣ್,** ಸಾರ್ವಜನಿಕ ಸಂಪರ್ಕ ಅಧಿಕಾರಿ — **ಸಂಚಾಲಕರು**
**ಶ್ರೀ ಎಸ್.ಕೆ. ನಾಗರಾಜ್,** ನಿಗಮ ವ್ಯವಹಾರ (ಹಿರಿಯ ಸಹಾಯಕ) — **ಉಪ ಸಂಚಾಲಕರು**
**ಶ್ರೀ ಆರ್.ಎಚ್. ಲಕ್ಷ್ಮೀಪತಿ,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ — **ಸದಸ್ಯರು**
**ಶ್ರೀ ಎನ್. ಪ್ರಕಾಶ್ ಕುಮಾರ್,** ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ — **ಸದಸ್ಯರು**
**ಶ್ರೀ ರಾಮಚಂದ್ರ ರೆಡ್ಡಿ,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ — **ಸದಸ್ಯರು**
**ಶ್ರೀ ಕುಮಾರ್ ಮುದ್ದವ್ವನವರ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೊಮಾ ಇ.ಸಂಘ — **ಸದಸ್ಯರು**
**ಶ್ರೀ ದಾಸ್‌ಪ್ರಕಾಶ್,** ಕವಿಪ್ರನಿನಿ ಪ. ಜಾತಿ ಮತ್ತು ಪ. ಪಂಗಡ ಕ್ಷೇಮಾಭಿವೃದ್ಧಿ ಸಂಘ — **ಸದಸ್ಯರು**


## ಮನವಿ

**ಬೆಸ್ಕಾಂ ಸ್ನೇಹಿ** ಗೃಹಪತ್ರಿಕೆಯಲ್ಲಿ ಪ್ರಕಟಣೆಗಾಗಿ ನಿಮ್ಮ ಅಭಿಪ್ರಾಯ, ಸಲಹೆ, ಲೇಖನ, ಕಛೇರಿಯಲ್ಲಿ ಏರ್ಪಡಿಸಿದ ಕಾರ್ಯಕ್ರಮ, ಸಮಾರಂಭಗಳ ಬಗ್ಗೆ ವರದಿಗಳು, ಅಧಿಕಾರಿ/ಸಿಬ್ಬಂದಿ ವರ್ಗದವರ ಸಾಧನೆಗಳ ಬಗ್ಗೆ ಮಾಹಿತಿಗಳನ್ನು ಕಳುಹಿಸಬೇಕಾದ ವಿಳಾಸ:
**ಸಾರ್ವಜನಿಕ ಸಂಪರ್ಕಾಧಿಕಾರಿ, ನಿಗಮ ಕಾರ್ಯಾಲಯ, ನೆಲಮಹಡಿ, ಬೆಸ್ಕಾಂ, ಕೆ.ಆರ್. ವೃತ್ತ, ಬೆಂಗಳೂರು-560 001.**
ಇಮೇಲ್ ವಿಳಾಸ: **bescommagazine@gmail.com**

**ವಿದ್ಯುತ್ ಸಂಬಂಧಿತ ಯಾವುದೇ ಸಹಾಯಕ್ಕಾಗಿ 24 ಗಂಟೆಗಳ ಸಹಾಯವಾಣಿ: 1912**
**ಸಂದೇಶ ಕಳುಹಿಸಿ: 58888 ವೆಬ್‌ಸೈಟ್: www.bescom.org**

Printed at Shubhodaya Printers, Mob: 99452 77806